ಓ ಎಸ ನಂಃ 129/2010

ಪಿ ಡಬ್ಲ್ಯುಃ 1

ದಿನಾಂಕಃ 28-07-2014

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಎ ಕೆ ವಕೀಲರಿಂದ.

ನನಗೆ ನಾಲ್ಕು ಮಂದಿ ಮಕ್ಕಳು ಎಂದರೆ ಸರಿ. ನನ್ನ ದೊಡ್ಡ ಮಗನಿಗೆ 30 ವರ್ಷ ವಯಸ್ಸಾಗಿರುತ್ತದೆ. ನಾನು ನನ್ನ ಮಗನಿಗಿಂತ 49 ವರ್ಷದೊಡ್ಡವಳಾಗಿರುತ್ತೇನೆ. ಗಂಗವ್ವಳಿಗಿಂತ ಉಳಿದ ಸಹೋದರಿಯವರು ಒಂದು ಒಂದು ವರ್ಷ ಚಿಕ್ಕವರಾಗಿರುತ್ತಾರೆ ಎಂದರೆ ಸರಿ. ನಾನು ವಾದಪತ್ರದಲ್ಲಿ 1ನೆ ಪ್ರತಿವಾದಿಯ ವಯಸ್ಸು 75 ಎಂದು ಬರೆಸಿರುವುದು ಸರಿ ಇರುತ್ತದೆ. 1ನೆ ವಾದಿಯು ಪಾರವ್ವಳಿಗಿಂತ ಒಂದು ವರ್ಷ ಚಿಕ್ಕವಳಾಗಿರುತ್ತಾಳೆ. 4 ರಿಂದ 8 ನೆ ವಾದಿಯರ ತಾಯಿ 1ನೆ ಪ್ರತಿವಾದಿಗಿಂತ ಒಂದು ವರ್ಷ ಚಿಕ್ಕವರಾಗಿರುತ್ತಾರೆ ಎಂದರೆ ಸರಿ. 1ನೆ ವಾದಿಯು 1ನೆ ಪ್ರತಿವಾದಿಗಿಂತ 2 ವರ್ಷ ಚಿಕ್ಕವರು ಎಂದರೆ ಸರಿ. 2ನೇ ವಾದಿಯು 1ನೆ ವಾದಿಗಿಂತ 2 ವರ್ಷ ಚಿಕ್ಕವಳಾಗಿರುತ್ತಾರೆ ಎಂದರೆ ಸರಿ. 2ನೆ ವಾದಿಯ ನಂತರ 3 ರಿಂದ 6ನೆ ಪ್ರತಿವಾದಿಯರ ತಂದೆ ಹುಟ್ಟಿರುತ್ತಾರೆ. ಅವರ ನಂತರ ನಾನು ಹುಟ್ಟಿರುತ್ತೇನೆ. ನಾನು ಎಲ್ಲರಿಗಿಂತ ಚಿಕ್ಕವಳಾಗಿರುತ್ತೇನೆ. ನಾನು 2ನೆ ವಾದಿಗಿಂತ 3 ವರ್ಷ ಚಿಕ್ಕವಳಾಗಿರುತ್ತೇನೆ. ನಾನು ನನ್ನ ಮತ್ತು ನನ್ನ ಸಹೋದರಿಯರ ಜನ್ಮ ದಿನಾಂಕ ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ನಾನು ನನ್ನ ವಕೀಲರಿಗೆ ಪಕ್ಷಗಾರರ ಹೆಸರನ್ನು ಹೇಳಿ ಬರೆಸಿಲ್ಲ.

ದಾವಾ ಸರ್ವೆ ನಂಬರ ಗೊತ್ತಿರುತ್ತದೆ. ಅದರ ನಂಬರ 27, 23 ಆಗಿರುತ್ತದೆ. ಇವುಗಳ ಚಕ್ಕುಬಂದಿ ಗೊತ್ತಿದ್ದು ಈಗ ನೆನಪಿಲ್ಲ. ಸರ್ವೆ ನಂಬರ 23 ರ ಚಕ್ಕುಬಂದಿ ಪಶ್ಚಿಮಕ್ಕೆ ಗೊವಿಂದಪ್ಪ ಅವರ ಆಸ್ತಿ , ಉತ್ತರ ದಿಕ್ಕಿಗೆ ಕೃಷ್ಣಪ್ಪ ಅಗಸಾದ ಅವರ ಆಸ್ತಿ, ಪೂರ್ವ ದಿಕ್ಕಿಗೆ ಕಾಶಪ್ಪ ಅವರ ಆಸ್ತಿ ದಕ್ಷಿಣ ದಿಕ್ಕಿನಲ್ಲಿ ದೇವಕ್ಕರವರ ಆಸ್ತಿ ಇರುತ್ತದೆ. ಅದೇ ರೀತಿಯಾಗಿ ಸರ್ವೆ ನಂಬರ 27 ರ ಪಶ್ಚಿಮಕ್ಕೆ ಕಾಡು, ದಕ್ಷಿಣ ದಿಕ್ಕಿಗೆ ರಸ್ತೆ, ಉತ್ತರಕ್ಕೆ ದುಂಡಪ್ಪ ಆವರ ಆಸ್ತಿ, ಪೂರ್ವಕ್ಕೆ ಗಫಾರ ಅವರ ಆಸ್ತಿ ಇರುತ್ತದೆ. ದಾವಾ ಆಸ್ತಿಯು ನನ್ನ ತಂದೆಯ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ದಾವಾ ಆಸ್ತಿಗಳು ಯಾವುದೇ ಕಾಲದಲ್ಲಿ ನನ್ನ ತಂದೆಯ ಆಸ್ತಿ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಯಾವಾಗ ಮೃತರಾದರು ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಪ್ರತಿವಾದಿಯರ ತಾಬಾದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಮತ್ತು ಪ್ರತಿವಾದಿಯರ ಜಂಟಿ ಸ್ವಾಧಿನದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. 3ನೆ ಪ್ರತಿವಾದಿಯು 2ನೆ ವಾದಿಯ ಮಗನ ಹೆಂಡತಿ ಎಂದರೆ ಸರಿ. 2ನೆ ವಾದಿಯ ಮಗ 3ನೆ ಪ್ರತಿವಾದಿಯನ್ನು ಮನೆಯಿಂದ ಹೊರ ಹಾಕಿರುತ್ತಾರೆ ಎಂದರೆ ಸರಿಯಲ್ಲ. 2ನೆ ವಾದಿಯ ಮಗ ಮತ್ತು 3 ನೆ ಪ್ರತಿವಾದಿ ಒಂದೇ ಮನೆಯಲ್ಲಿ ಕೂಡಿ ವಾಸವಿರುತ್ತಾರೆ. ಇದನ್ನು ನಾನು ನೋಡಿರುತ್ತೇನೆ. 3ನೆ

ಪ್ರತಿವಾದಿಯು ತನ್ನ ಗಂಡನ ಮೇಲೆ ಮನೆಯಿಂದ ಹೊರ ಹಾಕಿರುತ್ತಾರನೆ ಎಂದು ಜೀವನಾಂಶ ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಜೀವನಾಂಶದ ಆದೇಶವನ್ನು ಪಡೆದಿರುತ್ತಾರೆ ಎಂದರೆ ಸರಿ. 3ನೇ ಪ್ರತಿವಾದಿಯ ಗಂಡನ ಹೆಸರು ನಾಗಪ್ಪ ಇರುತ್ತದೆ. ಈ ದಾವೆ ಮಾಡುವಾಗ 3ನೆ ಪ್ರತಿವಾದಿಯ ಗಂಡನ ಹೆಸರು ಗೊತ್ತಿತ್ತು. 5ನೇ ಪ್ರತಿವಾದಿಗೆ ಮದುವೆಯಾಗಿದ್ದು ಆಕೆಯ ಗಂಡನ ಹೆಸರು ಕೇಶಪ್ಪ ಆಗಿರುತ್ತದೆ. ಈ ಕೇಸನ್ನು ಮಾಡುವ ಪೂರ್ವದಲ್ಲಿ ಅಂದರೆ 4 ವರ್ಷದ ಹಿಂದೆ 5ನೆ ಪ್ರತಿವಾದಿಯ ಮದುವೆಯಾಗಿತ್ತು, ನಾನು ಉದ್ದೇಶಪೂರ್ವಕವಾಗಿ 3 ಮತ್ತು 5ನೇ ಪ್ರತಿವಾದಿಯರ ಗಂಡನ ಹೆಸರು ಗೊತ್ತಿದ್ದರೂ ಯಾವ ಕಾರಣಕ್ಕಾಗಿ ಅವರ ತಂದೆಯ ಹೆಸರು ನಮೂದಿಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು 3ನೆ ಪ್ರತಿವಾದಿಯ ಮದುವೆಯಾಗಿತ್ತು ಆದರೆ 5ನೆ ಪ್ರತಿವಾದಿಯ ಮದುವೆಯಾಗಿಲ್ಲ ಎಂದು ನುಡಿಯುತ್ತಾರೆ. 3ನೆ ಪ್ರತಿವಾದಿಯ ತಂದೆ ಹೆಸರನ್ನು ವಾದಪತ್ರದಲ್ಲಿ ತಂದೆಯ ಆಸ್ತಿ ಎಂದು ತೋರಿಸಲು ಬರೆಸಿರುತ್ತೇನೆ. 3ನೆ ಪ್ರತಿವಾದಿಯ ಗಂಡನ ಹೆಸರು ಉದ್ದೇಶಪೂರ್ವಕವಾಗಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕೇಸು ಮಾಡುವಾಗ 3ನೆ ಪ್ರತಿವಾದಿಯ ಗಂಡನ ಹೆಸರು ಬರೆಸಬೇಕೆಂಬ ನೆನಪಿರಲಿಲ್ಲ.

2ನೆ ವಾದಿಯ ಮಗ ನಾಗಪ್ಪ ಕಬ್ಬೂರ ಗ್ರಾಮದ ಪ್ರೇಮವ್ವ ಎಂಬುವವರನ್ನು 2ನೆ ಮದುವೆಯಾಗಿರುತ್ತಾನೆ ಎಂದರೆ ಸರಿ. ನಾನು 2 ನೆ ವಾದಿಯ ಮಗ ಹೇಳಿದ ರೀತಿ ನಾನು ಮತ್ತು ಅವರ ತಾಯಿ ಕೇಳುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ನಾನು ಮತ್ತು ನನ್ನ ಸಹೋದರಿಯರು ಚಿಕ್ಕವರಾಗಿದ್ದಾಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಮದುವೆಯನ್ನು 1ನೆ ವಾದಿ ಮತ್ತು ಅವರ ಗಂಡ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ 15 ರಿಂದ 16 ವರ್ಷದ ಹಿಂದೆ ಮೃತರಾಗಿರುತ್ತಾರೆ. ದಾವಾ ಆಸ್ತಿಗಳು ಮೂಲತಃ ಪಕ್ಕಿರಪ್ಪ ಲಮಾಣಿ ಎಂಬುವವರ ಆಸ್ತಿ ಆಗಿರುತ್ತದೆ ಎಂದರೆ ಸರಿ.

ಮುಂಜಾನೆ ನ್ಯಾಯಾಲಯದ ಕಾಲಾವಧಿ ಮುಗಿದ ಕಾರಣ ಮುಂದುವರೆದ ಪಾಟಿಸವಾಲಿಗೆ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ. ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ
ಸವಣೂರ.